SN – 023

IIIsem B Com -37-

ಮೂರನೇ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2014

(Repeaters Scheme) (2011-12 only)

ಕನ್ನಡ ಭಾಷೆ – III

ಸಾಹಿತ್ಯ ಸಲ್ಲಾಪ – ೨ ಮತ್ತು ವ್ಯಾವಹಾರಿಕ ಕನ್ನಡ

Time : 3 Hours Max. Marks : 90

ಭಾಗ – 1

ಸಾಹಿತ್ಯ ಸಲ್ಲಾಪ – ೨

I. ಈ ಪದ್ಯದ ಭಾವಾರ್ಥ ಬರೆಯಿರಿ : (1×5=5)

ಕಲಿ ಪಂದೆಯೆಂದೆ ಬಗೆಯದೆ
ಕುಲಜಂ ಕುಲಹೀನನೆಂದು ಬಗೆಯದೆ ತರುಣಂ
ಸಲೆ ವೃದ್ಧನೆಂದು ಬಗೆಯದೆ
ನೆಲೆಸುವೆ ನಿನ್ನಿಂ ನಿಕೃಷ್ಟರೆಂಬರುಮೊಳರೇ.

II. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (3×5=15)

1) ಅವಸಾನದ ಅಂಚಿನಲ್ಲಿದ್ದ 'ದುರ್ಯೋಧನ'ನನ್ನು ಕಂಡ ಅಶ್ವತ್ಥಾಮನ ಪ್ರತಿಕ್ರಿಯೆ ಏನು ?

2) 'ಇಬ್ಬರು ರೈತರು' ಕವಿತೆಯಲ್ಲಿ ವ್ಯಕ್ತವಾಗಿರುವ ರೈತರ ಮುಗ್ಧತೆಯನ್ನು ಕುರಿತು ಬರೆಯಿರಿ.

3) ತಾಯಿ ಮಗನ ಪ್ರೀತಿ 'ಕಳ್ಳುಬಳ್ಳಿ' ಕತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

4) 'ರಾಮಾಯಣ ದರ್ಶನಂ' ಕೃತಿಯು ಲೇಖಕಿಗೆ ಇಷ್ಟವಾಗಲು ಕಾರಣವೇನು ?

5) ಮಾತು ಮತ್ತು ಗುಣ ಸ್ವಭಾವವನ್ನು ಕುರಿತು ಕಾರಂತರ ಅಭಿಪ್ರಾಯಗಳೇನು ?

III. ಇವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (3×10=30)

1) ದುರ್ಯೋಧನನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

2) ಬಿಜ್ಜಳ, ಜಗದೇವ, ಮಂಚ್ಯಣಕ್ರಮಿತ – ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

3) 'ಹತ್ತಿರದವರಿಂದಲೇ ಅನಾಹುತ ಜಾಸ್ತಿ' – ಈ ಹೇಳಿಕೆಯನ್ನು 'ಕಳ್ಳುಬಳ್ಳಿ' ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

4) ಭಾರತೀಯ ಸಂಸ್ಕೃತಿಯನ್ನು ಕುರಿತು ಕಾರಂತರ ನಿಲುವುಗಳನ್ನು ಸಂಗ್ರಹಿಸಿ.

5) 'ಕೈ ಹಿಡಿದವರು' ಪ್ರಬಂಧದ ಆಶಯವನ್ನು ವಿವರಿಸಿ.

P.T.O.

ಭಾಗ – 2

ವ್ಯಾವಹಾರಿಕ ಕನ್ನಡ

I. ಇವುಗಳಲ್ಲಿ **ನಾಲ್ಕು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(4×5=20)**

1) ಕನ್ನಡ ಭಾಷಾ ಬಳಕೆಯಲ್ಲಿರುವ ವ್ಯತ್ಯಾಸಗಳು.

2) ಪರಿಪತ್ರಗಳು.

3) ವ್ಯಾವಹಾರಿಕ ಪತ್ರದ ಅಂಗಗಳು.

4) ಪ್ರತ್ಯುತ್ತರ ಪತ್ರ.

5) ವಾಚಕರ ವಾಣಿ.

6) ಸಂಕ್ಷೇಪ ಲೇಖನ.

II. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2×10=20)**

1) ವಾಣಿಜ್ಯಶಾಸ್ತ್ರ ಉಪನ್ಯಾಸಕರ ಹುದ್ದೆಗೆ ಒಂದು ಅಭ್ಯರ್ಥನ ಪತ್ರದ ಮಾದರಿಯನ್ನು ರೂಪಿಸಿ.

2) ಅಂಕಪಟ್ಟಿಯಲ್ಲಿನ ನ್ಯೂನತೆ ಸರಿಪಡಿಸಲು ವಿಶ್ವವಿದ್ಯಾಲಯಕ್ಕೆ ಪತ್ರವೊಂದನ್ನು ಬರೆಯಿರಿ.

3) ಭ್ರಷ್ಟಾಚಾರದ ನಿರ್ಮೂಲನೆಗಾಗಿ ಪತ್ರಿಕಾ ಸಂಪಾದಕರಿಗೆ ಪತ್ರವೊಂದನ್ನು ಬರೆಯಿರಿ.

4) ಆದೇಶ ಪತ್ರ ಎಂದರೇನು ? ಸಂಸ್ಥೆಯೊಂದಕ್ಕೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ತರಿಸಿಕೊಳ್ಳುವ ಸಂದರ್ಭದಲ್ಲಿ ಬರೆಯಬಹುದಾದ ಆದೇಶ ಪತ್ರದ ಮಾದರಿಯೊಂದನ್ನು ಬರೆಯಿರಿ.